ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ 2016–17 ನೇ ಸಾಲಿನ ವಾರ್ಷಿಕ ವರದಿ

ಮುನ್ನುಡಿ

ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವು ಶಾಸನ ಬದ್ದ ಪ್ರಾಧಿಕಾರವಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961 ಸೆಕ್ಷನ್ 4(ಸಿ) ರ ಅಡಿಯಲ್ಲಿ ಸರ್ಕಾರ ಆದೇಶ ಸಂಖ್ಯೆ: ನಅಇ 142 ಎಎನ್ಎಕ್ಸ್ 95 ದಿನಾಂಕ: 12–01–1996 ರಂತೆ ರಚಿಸಲಾಗಿದೆ.

ಧ್ಯೇಯೋದ್ದೇಶಗಳು

ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರದೇಶದ ಯೋಜನಾಬದ್ದ ಬೆಳವಣಿಗಾಗಿ ಮಹಾಯೋಜನೆ (Master Plan) ತಯಾರಿಸುವುದು ಅಭಿವೃದ್ಧಿ ಚಟುವಟಿಕೆಗಳು ಹಾಗೂ ಬೆಳವಣಿಗೆಗಳನ್ನು ಯೋಜನಾಬದ್ದವಾಗಿ ನಿಯಂತ್ರಿಸುವುದು.

ವ್ಯಾಪ್ತಿ

ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 142 ಎಂಎನ್ಎಕ್ಸ್ 95 ದಿನಾಂಕ: 12–01–1996 ರಂದು ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದ್ದು ದಿನಾಂಕ: 29–02–1996 ರಂದು ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ. ಸದರಿ ಯೋಜನಾ ಪ್ರದೇಶಕ್ಕೆ ಕೆಲವೊಂದು ಗ್ರಾಮಗಳನ್ನು ಸೇರಿಸಿ ಅಧಿಸೂಚನೆ ಸಂಖ್ಯೆ: ನಅಇ/142/ಎಂಎನ್ಎಕ್ಸ್/95 ದಿನಾಂಕ: 14–05–1997 ರಂತೆ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 4(ಸಿ) ರಡಿಯಲ್ಲಿ ಅಂತಿಮವಾಗಿ ದೇವನಹಳ್ಳಿ ತಾಲ್ಲೂಕಿನ 214 ಗ್ರಾಮಗಳು, ದೊಡ್ಡಬಳ್ಳಾಪುರ ಕಸಬಾ ಹೋಬಳಿಯ 67 ಗ್ರಾಮಗಳು ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಮತ್ತು ಹೆಸರಘಟ್ಟ ಹೋಬಳಿಯ 60 ಗ್ರಾಮಗಳು ಒಟ್ಟು 347 ಗ್ರಾಮಗಳನ್ನು ಒಳಗೊಂಡಿದ್ದು 792 ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು, ಸರ್ಕಾರ ಆದೇಶ ಸಂಖ್ಯೆ ನಅಇ 157 ಬಿಎಂಆರ್ 2005 ರ ದಿನಾಂಕ: 27–01–2009 ಮತ್ತು ತಿದ್ದುಪಡಿ ದಿನಾಂಕ: 29–01–2009 ರಲ್ಲಿ ಅನುಮೋದಿಸಲಾಗಿದ್ದು, ಹಾಲಿ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ 792.00 ಚದರಕಿ.ಮೀ.ಗಳಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 175 ಬಿಎಂಆರ್ 2015 ದಿನಾಂಕ: 29–02–2016 ಹಾಲಿ ಇರುವ ಸ್ಥಳೀಯ ಯೋಜನಾ ಪ್ರದೇಶಕ್ಕೆ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲ ಸಾಸಲು ತೂಬಗೆರೆ ಹೋಬಳಿಗಳ ಗ್ರಾಮಗಳನ್ನು ಸೇರಿಸಿ ವಿಸ್ತರಿಸಲಾಗಿದೆ. ವಿಸ್ತರಿಸಿದ ಪ್ರದೇಶದ ವಿಸ್ತೀರ್ಣ 538.11 ಚದರ ಕಿ.ಮೀ.ಗಳಿದ್ದು ಒಟ್ಟು ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ 1330.11 ಚದರ ಕಿ.ಮೀ.ಗಳಾಗುತ್ತದೆ.

ಮುಂದುವರೆದಂತೆ, ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 36 ಬಿಎಂಆರ್ 2016, ಬೆಂಗಳೂರು ದಿನಾಂಕ: 24–06–2016 ರ ರನ್ವಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 (ಕರ್ನಾಟಕ ಕಾಯ್ದೆ–11) ಪ್ರಕರಣ 4–ಬಿ, ಉಪಪ್ರಕರಣ (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ: 24–06–2016 ರಿಂದ ಜಾರಿಗೆ ಬರುವಂತೆ "ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶ" ರಚಿಸುವ ಸಲುವಾಗಿ ಅಧಿಸೂಚನೆಯೊಂದಿಗೆ ಲಗತ್ತಿಸಲಾಗಿರುವ ಅನುಬಂಧ–III ರಲ್ಲಿ ವಿವರಿಸಿರುವ ಗ್ರಾಮಗಳ ವಿವರಗಳನ್ನೊಳಗೊಂಡಂತೆ ಇವುಗಳನ್ನು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ, ಹೊಸಕೋಟೆ, ಆನೇಕಲ್, ಕನಕಪುರ, ರಾಮನಗರ–ಚನ್ನಪಟ್ಟಣ, ಮಾಗಡಿ ನೆಲಮಂಗಲ ವ್ಯಾಪ್ತಿಗೆ ಒಳಪಟ್ಟಿರುವ ಅಭಿವೃದ್ಧಿ ಪ್ರಾಧಿಕಾರ/ಯೋಜನಾ ಪ್ರಾಧಿಕಾರದ ವ್ಯಾಪ್ತಿಗಳಿಂದ ಹಾಗೂ ಯೋಜನಾ ವಲಯ–1 (APZ-1) ವ್ಯಾಪ್ತಿಯಿಂದ ಹಿಂತೆಗೆದುಕೊಳ್ಳಲಾಗಿದೆ ಎಂದು ಬಿಎಂಆರ್‌ಡಿಎಯಿಂದ ತಿಳಿಸಲಾಗಿದೆ. ಸದರಿ ಅನುಬಂಧ – III ರಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಿಂದ 79 ಗ್ರಾಮಗಳನ್ನು ಸುಮಾರು 202.00 ಚ.ಕಿ.ಮೀ ಕೈಬಿಟ್ಟು ಹೋಗಿರುತ್ತದೆ.

ಪರಿಷ್ಕೃತ ಮಹಾಯೋಜನೆ ತಯಾರಿಕೆ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 10 ರನ್ವಯ ಉದ್ದೇಶ ಘೋಷಣೆಯ ಬಗ್ಗೆ.

ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರರವರ ಪತ್ರ ಸಂಖ್ಯೆ ಬಿಎಂಆರ್‌ಡಿಎ/ಬಿಐಎಎಪಿಎ/ಎಂ.ಪ್ಲಾನ್/2005–06/ಭಾಗ–2 ದಿನಾಂಕ: 08–10–2015 ರಲ್ಲಿ ಹಾಲಿ ಇರುವ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕರಣೆ ಮಾಡಲು ಸೂಚಿಸಿರುವಂತೆ ಹಾಲಿ ಇರುವ ಸ್ಥಳೀಯ ಯೋಜನಾ ಪ್ರದೇಶದ ಅನುಮೋದಿತ ಮಹಾಯೋಜನೆ ಪರಿಷ್ಕರಣೆಯೊಂದಿಗೆ ವಿಸ್ತರಿಸಿದ ಸ್ಥಳೀಯ ಯೋಜನಾ ಪ್ರದೇಶವನ್ನು ಸೇರಿಸಿಕೊಂಡು ಮಹಾಯೋಜನೆ ತಯಾರಿಸಬೇಕಾಗಿದ್ದು, ಪರಿಷ್ಕೃತ ಮಹಾಯೋಜನೆ ತಯಾರಿಕೆ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 10 ರನ್ವಯ ಉದ್ದೇಶ ಘೋಷಣೆಯನ್ನು ದಿನ ಪತ್ರಿಕೆಗಳಲ್ಲಿ ಹಾಗೂ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ. ಅದರಂತೆ ಮುಂದಿನ ಮಹಾಯೋಜನೆ ಪರಿಷ್ಕರಣೆ ತಯಾರಿಕೆ ಕಾರ್ಯ ಪ್ರಕ್ರಿಯೆಯಲ್ಲಿದೆ.

ಪ್ರಾಧಿಕಾರದ ರಚನೆ

ಸರ್ಕಾರದ ಆದೇಶ ಸಂಖ್ಯೆ ನಅಇ 188 ಬಿಎಂಆರ್ 2013 ದಿ: 25–06–2013 ರ ಪ್ರಕಾರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 4(ಸಿ) ರಲ್ಲಿನ (3)ರ (i) ಮತ್ತು (iv) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಧ್ಯಕ್ಷರನ್ನು ನೇಮಿಸಿದೆ. ಅಲ್ಲದೇ ಸರ್ಕಾರವು ನೇಮಿಸಿದ ಒಟ್ಟಾರೆ ಸದಸ್ಯರ ವಿವರಗಳು ಈ ಕೆಳಗಿನಂತಿರುತ್ತದೆ.

1. ಶ್ರೀ ಎನ್. ನಾಗರಾಜ್ (ಎಂ.ಟಿ.ಬಿ) ಅಧ್ಯಕ್ಷರು,
2. ಶ್ರೀ ಎಂ.ಎಲ್.ಎ ಕೃಷ್ಣಪ್ಪ, ಸದಸ್ಯರು
3. ಶ್ರೀ ಶ್ರೀರಾಮಯ್ಯ ಸದಸ್ಯರು
4. ಶ್ರೀ ಎನ್.ಟಿ. ನಾಗೇಶ್, ಸದಸ್ಯರು
5. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ,

6. ಕಾರ್ಯನಿರ್ವಾಹಕ ಸದಸ್ಯರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
7. ಅಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ,
8. ಅಧ್ಯಕ್ಷರು, ಪುರಸಭೆ, ವಿಜಯಪುರ,
9. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಜಿಲ್ಲೆ.
10. ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ,
11. ಮುಖ್ಯಾಧಿಕಾರಿಗಳು, ಪುರಸಭೆ, ದೇವನಹಳ್ಳಿ ,
12. ಮುಖ್ಯಾಧಿಕಾರಿಗಳು, ಪುರಸಭೆ, ವಿಜಯಪುರ,
13. ಹಿರಿಯ ವಿಮಾನ ನಿಲ್ದಾಣ ಅಧಿಕಾರಿಗಳು, ಎಟಿಎಸ್ ಕಾಂಪ್ಲೆಕ್ಸ್, ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ದೇವನಹಳ್ಳಿ, ಬೆಂಗಳೂರು 562 110
14. ಉಪ ವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಉಪವಿಭಾಗ, ಬೆಂಗಳೂರು.
15. ಉಪ ವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ, ಬೆಂಗಳೂರು.
16. ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು (ಖಾಯಂ ಆಹ್ವಾನಿತರು)
17. ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ (ಖಾಯಂ ಆಹ್ವಾನಿತರು)

ಪ್ರಾಧಿಕಾರದ ಕಾರ್ಯಕ್ಷಮತೆ:

ಪ್ರಾಧಿಕಾರದಲ್ಲಿ 01–04–2016 ರಿಂದ ಮಾರ್ಚ್ 31–03–2017 ವರೆಗೆ ಸ್ವೀಕೃತವಾಗಿರುವ ಕಡತಗಳ ವಿವರಗಳು

ಕ್ರ.ಸಂ.	ಅರ್ಜಿಗಳ ವಿವರಗಳು	ಸ್ವೀಕೃತವಾಗಿರುವ ಒಟ್ಟು ಅರ್ಜಿಗಳು	ಕ್ರಮ ಕೈಗೊಂಡಿರುವ ಅರ್ಜಿಗಳ ಸಂಖ್ಯೆ
1.	ಭೂ ಉಪಯೋಗ ಬದಲಾವಣೆ	ಒಟ್ಟು 71 ಅರ್ಜಿಗಳು	14 ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಬಿ.ಎಂ.ಆರ್.ಡಿ.ಎ ಮೂಲಕ ಸರ್ಕಾರಕ್ಕೆ ಕಳುಹಿಸ ಲಾಗಿದ್ದು ಸರ್ಕಾರದಿಂದ ಅದೇಶವಾಗಿರುತ್ತದೆ, ಉಳಿಕೆ 57 ಕಡತಗಳಿಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.
	ಭೂ ಉಪಯೋಗ ನಿಗಧಿ	ಒಟ್ಟು 43 ಅರ್ಜಿಗಳು	12 ಪ್ರಕರಣಗಳಿಗೆ ಸಂಬಂಧಿಸಿದಂತೆ ಭೂ ಉಪಯೋಗ ನಿಗಧಿಪಡಿಸಿ ಆದೇಶವನ್ನು ನೀಡಲಾಗಿರುತ್ತದೆ. ಉಳಿಕೆ 31 ಕಡತಗಳಿಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.
2.	ಕಟ್ಟಡ ನಕ್ಷೆಗಳಿಗೆ ಅನುಮತಿ ಕೋರಿರುವ ಬಗ್ಗೆ.	ಒಟ್ಟು 132 ಅರ್ಜಿಗಳು	ಪುರಸಭಾ ವತಿಯಿಂದ ಸ್ವೀಕೃತವಾಗಿರುವ ಕಡತಗಳಿಗೆ ತಾಂತ್ರಿಕ ಅಭಿಪ್ರಾಯವನ್ನು ನೀಡಲಾಗಿದೆ. ಹಾಗೂ ಪ್ರಾಧಿಕಾರದಲ್ಲಿ ನೇರವಾಗಿ ಸ್ವೀಕೃತವಾಗಿರುವ ಅರ್ಜಿಗಳಿಗೆ ಅಗತ್ಯ ಶುಲ್ಕಗಳನ್ನು ಪಾವತಿಸಿಕೊಂಡು 73 ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗಿದೆ. ಉಳಿಕೆ 59 ಕಡತಗಳಿಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

3.	ಲೇಔಟ್ ಅನುಮೋದನೆ ಕೋರಿ ಸ್ವೀಕೃತವಾಗಿರುವ ಅರ್ಜಿ ಮತ್ತು ಮನವಿ ಪತ್ರಗಳು.	ಒಟ್ಟು 81 ಅರ್ಜಿಗಳು	ಒಟ್ಟು 15 ಪ್ರಕರಣಗಳಲ್ಲಿ ವಿನ್ಯಾಸಕ್ಕೆ ಅನುಮೋದನೆ ನೀಡಲಾಗಿದೆ. ಉಳಿಕೆ 66 ಕಡತಗಳಿಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.
4.	ಭೂ ಪರಿವರ್ತನೆ ಮಾಡಲು ತಾಂತ್ರಿಕ ಅಭಿಪ್ರಾಯ ಕೋರಿ ಜಿಲ್ಲಾಧಿಕಾರಿಯವರಿಂದ ಸ್ವೀಕೃತವಾಗಿರುವ ಕಡತಗಳು	ಒಟ್ಟು 342 ಕಡತಗಳು	224 ಪ್ರಕರಣಗಳಿಗೆ ತಾಂತ್ರಿಕ ಅಭಿಪ್ರಾಯವನ್ನು ನೀಡಲಾಗಿದೆ. ಉಳಿಕೆ 118 ಕಡತಗಳಿಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.
5.	ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಸ್ವೀಕೃತವಾಗಿರುವ ಅರ್ಜಿಗಳು	ಒಟ್ಟು 175 ಅರ್ಜಿಗಳು	175 ಪ್ರಕರಣಗಳಿಗೆ ಅಗತ್ಯ ಮಾಹಿತಿಗಳನ್ನು ಅರ್ಜಿದಾರರಿಗೆ ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 254 ಬಿಎಂಆರ್ 2013 ದಿನಾಂಕ: 09–09–2015 ರಂತೆ ಪ್ರಾಧಿಕಾರದಲ್ಲಿರುವ ಹುದ್ದೆಗಳ ವಿವರಗಳು ಈ ಕೆಳಗಿನಂತಿದ್ದು, ಸದರಿ ಹುದ್ದೆಗಳನ್ನು ದಿನಾಂಕ: 31–03–2017 ರವರೆಗೆ ಮುಂದುವರೆಸಿ ಆದೇಶಿಸಲಾಗಿರುತ್ತದೆ.

ಕ್ರ.ಸಂ	ಹುದ್ದೆಗಳ ವಿವರ	ಮಂಜೂರಾದ ಹುದ್ದೆಗಳು	ನೇಮಕಗೊಂಡ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
01	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು.	01–ಹುದ್ದೆ	01	–
02	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು.	01–ಹುದ್ದೆ	01	–
03	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	01–ಹುದ್ದೆ	01	–
04	ನಗರ ಯೋಜಕರು	03–ಹುದ್ದೆ	03	–
05	ಸಹಾಯಕ ನಗರ ಯೋಜಕರು	01–ಹುದ್ದೆ	–	01
06	ಛಾಯಾ ಮುದ್ರಕ	01–ಹುದ್ದೆ	–	01
07	ಮೋಜಣಿ ಸಹಾಯಕ	01–ಹುದ್ದೆ	–	01
08	ಬೆರಳಚ್ಚುಗಾರ	01–ಹುದ್ದೆ	–	01
09	ಪ್ರಥಮ ದರ್ಜೆ ಸಹಾಯಕ	01–ಹುದ್ದೆ	01	–
10	ದ್ವಿತೀಯ ದರ್ಜೆ ಸಹಾಯಕ	01–ಹುದ್ದೆ	–	01
12	ಸೇವಕ	02–ಹುದ್ದೆ	–	02
13	ವಾಹನ ಚಾಲಕ	01–ಹುದ್ದೆ	–	01
	ಒಟ್ಟು	**15**	**07**	**08**

ದಿನಾಂಕ 01–04–2016 ರಿಂದ 31–03–2017 ರ ಅವಧಿಯಲ್ಲಿ ಈ ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸಿರುವ

ಅಧಿಕಾರಿಗಳ / ಸಿಬ್ಬಂದಿಗಳ ವಿವರಗಳು

ಕ್ರ.ಸಂ	ಅಧಿಕಾರಿಗಳ / ಸಿಬ್ಬಂದಿಗಳ ವಿವರ	ಪದನಾಮ	ಸೇವೆ ಸಲ್ಲಿಸಿರುವ ಅವಧಿ	ಪ್ರಾಧಿಕಾರದ/ ಇಲಾಖಾ ನಿಯೋಜನೆ
01	ಶ್ರೀ ಜೆ.ಸುಮ	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು /ಸದಸ್ಯ ಕಾರ್ಯದರ್ಶಿ	01–04–2016 ರಿಂದ 31–03–2017 ರವರೆಗೆ	ನಗರ ಯೋಜನಾ ಇಲಾಖೆ
02	ಶ್ರೀ ಪಂಡರಿನಾಥ ಜಿ.ರೆಡ್ಡಿ	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	01–04–2016 ರಿಂದ 31–03–2017 ರವರೆಗೆ	ನಗರ ಯೋಜನಾ ಇಲಾಖೆ
03	ಶ್ರೀ ಜಿ. ಮಂಜುನಾಥ್	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	01–07–2016 ರಿಂದ 31–03–2017 ರವರೆಗೆ	ನಗರ ಯೋಜನಾ ಇಲಾಖೆ
04	ಶ್ರೀ ಜಿ. ನರೇಂದ್ರಸಿಂಗ್	ನಗರ ಯೋಜಕ	01–04–2016 ರಿಂದ 31–03–2017 ರವರೆಗೆ	ನಗರ ಯೋಜನಾ ಇಲಾಖೆ
05	ಶ್ರೀ ಸಿ. ನವೀನ್‌ನಾಯಕ್	ನಗರ ಯೋಜಕ	16–12–2016 ರಿಂದ 31–03–2017 ರವರೆಗೆ	ನಗರ ಯೋಜನಾ ಇಲಾಖೆ
06	ಶ್ರೀ ಕೆ.ವಿ.ರವಿಕಿರಣ್	ನಗರ ಯೋಜಕ	05–10–2016 ರಿಂದ 31–03–2017 ರವರೆಗೆ	ನಗರ ಯೋಜನಾ ಇಲಾಖೆ
07	ಶ್ರೀ.ಕೆ.ನವೀನ್‌ಕುಮಾರ್	ಪ್ರಥಮ ದರ್ಜೆ ಸಹಾಯಕ	01–04–2016 ರಿಂದ 31–03–2017 ರವರೆಗೆ	ರಾಜ್ಯ ಲೆಕ್ಕ ಪತ್ರ ಇಲಾಖೆ

ಮೇಲ್ಕಂಡಂತೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು ಸರ್ಕಾರದ ಆದೇಶ ಹಾಗೂ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದು, ಉಳಿದಂತೆ ಬೆರಳಚ್ಚುಗಾರರು, ದ್ವಿತೀಯ ದರ್ಜೆ ಸಹಾಯಕರು, ಇಬ್ಬರು ಸೇವಕರು ಮತ್ತು ಮೂವರು ವಾಹನ ಚಾಲಕರು ಮತ್ತು ಒಬ್ಬ ರಾತ್ರಿ ಕಾವಲುಗಾರನನ್ನು ಮೆ॥ ಎಸ್.ಎ. ಮ್ಯಾನ್ ಪವರ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ರವರಿಂದ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಿದ್ದು, ಸದರಿಯವರಿಂದ ಕಾರ್ಯ ನಿರ್ವಹಿಸಲಾಗುತ್ತಿದೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ವ್ಯಾಪ್ತಿಯ ಬೆಂಗಳೂರು ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳ ಸಂಕ್ಷೀಪ್ತ ವರದಿ

- ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿರುವ ಬರುವ ಎಂಟು ಕೆರೆಗಳ ಅಭಿವೃದ್ಧಿಗಾಗಿ ಸಣ್ಣ ನೀರಾವರಿ ಇಲಾಖೆಯಿಂದ ದಿನಾಂಕ: 22–02–2016 ರಂದು ಸಹಮತಿ ನೀಡಲಾಗಿದೆ. ಸರ್ಕಾರದ ಆಡಳಿತಾತ್ಮಕ ಅನುಮೋದನೆಗಾಗಿ ದಿನಾಂಕ: 31–03–2016ರಂದು ಬಿಐಂಆರ್‌ಡಿಎಗೆ ಈ ಪ್ರಾಧಿಕಾರದಿಂದ ರೂ. **8,60,00,000–00 ಗಳಿಗೆ** ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸರ್ಕಾರದಿಂದ ಸದರಿ ಪ್ರಸ್ತಾವನೆಗಳಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಈ ಪ್ರಾಧಿಕಾರದಿಂದ ದಿ–27/12/2016 ರಂದು ಸಣ್ಣ ನೀರಾವರಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ರವರಿಗೆ ಪತ್ರ ಬರೆಯಲಾಗಿರುತ್ತದೆ.
- ಪ್ರಾಧಿಕಾರದ ವ್ಯಾಪ್ತಿಯಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಡುವ ವಿವಿಧ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ. **22,09,00,000–00** ಗಳಿಗೆ ಪ್ರಸ್ತಾವನೆಗಳನ್ನು ಕೆರೆ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ಸಣ್ಣ ನೀರಾವರಿ ಇಲಾಖೆ ರವರಿಗೆ ಸಲ್ಲಿಸಲಾಗಿದೆ. ಪ್ರಸ್ತಾವನೆಯು ಕೆರೆ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ಸಣ್ಣ ನೀರಾವರಿ ಇಲಾಖೆಯಲ್ಲಿ ಬಾಕಿ ಇರುತ್ತದೆ.
- ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಜಿಲ್ಲಾ ಪಂಚಾಯತಿ ಇಲಾಖೆಯ 132 ಕೆರೆಗಳು ಹಾಗೂ ಸಣ್ಣ ನೀರಾವರಿ ಇಲಾಖೆಯ 17 ಕೆರೆಗಳನ್ನು ಒಟ್ಟು 149 ಕೆರೆಗಳನ್ನು ಅಭಿವೃದ್ಧಿಪಡಿಸುವ ಸಂಬಂಧ 116 ನೇ ಪ್ರಾಧಿಕಾರದ ಸಭೆಯಲ್ಲಿ ಅನುಮೋದನೆಯಾಗಿದ್ದು ಸದರಿ ಮೊತ್ತಕ್ಕೆ ಒಟ್ಟಾರೆ ರೂ **43,69.00.000** ಗಳನ್ನು ಕಾಯ್ದಿರಿಸಲಾಗಿದೆ.
- ಉದ್ಯಾನವನ ಉದ್ದೇಶಕ್ಕಾಗಿ ಭೂ ಸ್ವಾಧೀನಪಡಿಸಿಕೊಳ್ಳಲು ಸರ್ಕಾರದಿಂದ ದಿನಾಂಕ:16–03–2016 ರಂದು ಅನುಮೋದನೆ ನೀಡಲಾಗಿದೆ. ಈ ಉದ್ದೇಶಕ್ಕೆ ಒಟ್ಟು ಮೊತ್ತ. **30,00,00,000–00** ರೂ.ಗಳನ್ನು ಮೀಸಲಿಡಲಾಗಿದೆ.
- ಸರ್ಕಾರದಿಂದ ಅನುಮೋದನೆಯಾಗಿ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ರೂ.–19,66,47,591–00 ಗಳು ಬಾಕಿ ಇದ್ದು, ಪಾವತಿಸಬೇಕಾಗಿರುತ್ತದೆ.
- ಸಿ.ಟಿ.ಟಿ.ಎಸ್ ಯೋಜನೆಯಡಿಯಲ್ಲಿ ಕಾಮಗಾರಿಗಳಿಗಾಗಿ ದೊಡ್ಡಬಳ್ಳಾಪುರ – 4.96, ಕೋಟಿ ದೇವನಹಳ್ಳಿ – 6.55, ಕೋಟಿ ರೂ. ಒಟ್ಟು **11.51 ಕೋಟಿ** ರೂ.ಗಳಷ್ಟು ಮೊತ್ತವನ್ನು ಮೀಸಲಾಗಿಡಲಾಗಿದೆ.
- RUB (ರೈಲ್ವೇ ಅಂಡರ್ ಪಾಸ್) ನಿರ್ಮಾಣ ಕಾಮಗಾರಿಗಾಗಿ ಕಾಯ್ದಿರಿಸಿದ ಒಟ್ಟು ಮೊತ್ತ **3,00,00,000–00** ರೂ. ಗಳಿರುತ್ತವೆ.

ಸರ್ಕಾರದ ಅದೇಶ ಸಂಖ್ಯೆ:ನಅಇ 200 ಬಿಎಂಆರ್ 2010 ದಿನಾಂಕ:19-09-2011 ರಂತೆ ನಡಾವಳಿಯಂತೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ **ಉತ್ತಮತೆ ಶುಲ್ಕದ** ಖಾತೆಯ ಆರ್ಥಿಕ ಪರಿಸ್ಥಿತಿ ಹಾಗೂ ಕಾಮಗಾರಿ ವಿವರಗಳ ಲೆಕ್ಕದ ವಿವರಗಳು.

ಕ್ರ ಸಂ	ವಿವರಗಳು	ಒಟ್ಟು ಮೊತ್ತ
1.	ಪ್ರಾಧಿಕಾರದ ಖಾತೆಯಲ್ಲಿರುವ ಒಟ್ಟು ಮೊತ್ತ	**149,94,00,000-00**
	1. ಈಗಾಗಲೇ ಭೂ ಸ್ವಾಧೀನಕ್ಕೆ ನಿಗಧಿಪಡಿಸಿರುವ ಮೊತ್ತವನ್ನು ಪ್ರಾಧಿಕಾರದಿಂದ ಜಿಲ್ಲಾಧಿಕಾರಿಗಳಿಗೆ ನೀಡುವ ಸಂಬಂಧ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುವ ಒಟ್ಟು ಕಾಯ್ದಿರಿಸಿದ ಮೊತ್ತ-**30,24,00,000-00** 2. ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಾಮಗಾರಿಗಳನ್ನು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದ ಜಿಲ್ಲಾಪಂಚಾಯತ್ ಮತ್ತು ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಿಗೆ ಪಾವತಿಸಲು ಕಾಯ್ದಿರಿಸಿದ ಒಟ್ಟು ಮೊತ್ತ- **19,53,66,264-00** 3. ಸರ್ಕಾರದಿಂದ ಅನುಮೋದಿತವಾದ ಹಳೇ ಕಾಮಗಾರಿಗಳಿಗೆ ಪಾವತಿಸಬೇಕಾದ ಬಾಕಿ ಮೊತ್ತ- **2,12,81,324-00** 4. RUB (ರೈಲ್ವೇ ಅಂಡರ್‌ಪಾಸ್) ನಿರ್ಮಾಣ ಕಾಮಗಾರಿಗಾಗಿ ಕಾಯ್ದಿರಿಸಿದ ಮೊತ್ತ - **3,00,00,000-00** 5. ಸಿ.ಸಿ.ಟಿ.ಎಸ್ ಕಾಮಗಾರಿಗಳಿಗೆ ಕಾಯ್ದಿರಿಸಿದ ಮೊತ್ತ- **12,00,00,000-00** 6. ಭದ್ರತಾ ಠೇವಣಿ ಮೊತ್ತ **-12,13,27,584-00** 7. ಎಸ್.ಟಿ.ಪಿ. ಕಾಮಗಾರಿಗಳ ಸಂಬಂಧದ ಭದ್ರತಾ ಠೇವಣಿ ಶುಲ್ಕ-**7,39,12,509-00** ಮೇಲೆ ವಿವರಿಸಿರುವ ಎಲ್ಲಾ ಕಾಮಗಾರಿಗಳಿಗೆ ಪಾವತಿಸಬೇಕಾದ ಬಾಕಿ ಮೊತ್ತ	**83,42,87,681-00**
	ಉಳತಾಯವಾದ ಮೊತ್ತ	**66,51,12,319-00**
6	ಸರ್ಕಾರದ ಅದೇಶ ಸಂಖ್ಯೆ:ನಅಇ 200 ಬಿಎಂಆರ್ 2010 ದಿನಾಂಕ: 19-09-2011 ರಂತೆ **ಆಡಳಿತಾತ್ಮಕ ವೆಚ್ಚ** ಕ್ಕಾಗಿ ಶೇ 25 ರ ಮೊತ್ತ	**16,62,78,080-00**
8	ಸರ್ಕಾರದ ಅದೇಶ ಸಂಖ್ಯೆ:ನಅಇ 200 ಬಿಎಂಆರ್ 2010 ದಿನಾಂಕ: 19-09-2011 ರಂತೆ ಶೇ 75 ರ ಮೊತ್ತ	**49,88,34,239-00**
13	**31-03-2017 ರ ಅಂತ್ಯಕ್ಕೆ ಖಾತೆಯಲ್ಲಿನ ಉಳಕೆ ಮೊತ್ತ**	**70,00,000-00**

ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ **ಕೆರೆ ಸಂರಕ್ಷಣೆ** ಖಾತೆಯ ಆರ್ಥಿಕ ಪರಿಸ್ಥಿತಿ ಹಾಗೂ ಕಾಮಗಾರಿ ವಿವರಗಳ ಲೆಕ್ಕದ ವಿವರಗಳು.

ಕ್ರಸಂ	ವಿವರಗಳು	ಒಟ್ಟು ಮೊತ್ತ
1.	ಪ್ರಾಧಿಕಾರದ ಖಾತೆಯಲ್ಲಿರುವ ಒಟ್ಟು ಮೊತ	**80,95,00,000 -00**
2.	ಸಣ್ಣ ನೀರಾವರಿ ಇಲಾಖೆಯ ವಿವಿಧ ಕೆರೆಗಳ ಅಭಿವೃದ್ಧಿ ಕಾಮಗಾರಿಗಳ ಕೈಗೊಳ್ಳಲು ಸರ್ಕಾರದಿಂದ ಅನುಮತಿ ನೀಡಿದ್ದು ಸದರಿ ಕಾಮಗಾರಿಗೆ ಕಾಯ್ದಿರಿಸಿದ ಒಟ್ಟು ಮೊತ್ತ.	**(-) 8,60,00,000-00**
3	ಪ್ರಾಧಿಕಾರದ ವ್ಯಾಪ್ತಿಯಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಡುವ ವಿವಿಧ ಕೆರೆಗಳ ಅಭಿವೃ65ದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಿರುವ ಕಾಮಗಾರಿಗಳ ಮೊತ್ತ.	**(-) 24,76,00,000-00**
4	ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಜಿಲ್ಲಾ ಪಂಚಾಯತಿ ಇಲಾಖೆಯ 132 ಕೆರೆಗಳು ಹಾಗೂ ಸಣ್ಣ ನೀರಾವರಿ ಇಲಾಖೆಯ 17 ಕೆರೆಗಳನ್ನು ಒಟ್ಟು 149 ಕೆರೆಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಸಭೆಯಲ್ಲಿ ಅನುಮೋದನೆಯಾಗಿದ್ದು ಸದರಿ ಮೊತ್ತಕ್ಕೆ ಕಾಯ್ದಿರಿಸಿದ ಒಟ್ಟಾರೆ ಮೊತ್ತ.	**(-) 43,69.00.000-00**
5	31-03-2017 ರ ಅಂತ್ಯಕ್ಕೆ ಖಾತೆಯಲ್ಲಿನ ಉಳಿಕೆ ಮೊತ್ತ	**21,00,000-00**

ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ 2016–17 ನೇ ಸಾಲಿನ ಮಾಹೆಯ ಜಮಾ ಮತ್ತು ವೆಚ್ಚದ ವಿವರ

ಕ್ರ.ಸ	ಜಮೆಗಳ ವಿವರ	ಒಟ್ಟು	ಕ್ರ.ಸ.	ವೆಚ್ಚದ ವಿವರ	ಒಟ್ಟು
1	ನಿಶ್ಚಿತ ಠೇವಣಿ ಪಕ್ವತೆಯ ಮೊತ್ತ	22,100,44,867	1	ನಿಶ್ಚಿತ ಠೇವಣಿಯಲ್ಲಿ ತೊಡಗಿಸಿರುವ ಬಾಬ್ತು	226,53,01,100
2	ಕೆರೆಗಳ ಸಂರಕ್ಷಣಾ ಶುಲ್ಕ	8,53,44,450	2	ಕಾಮಗಾರಿಗಳ ಬಾಬ್ತು ಜಿಲ್ಲಾ ಪಂಚಾಯತಿ ಮತ್ತು ಲೋಕೋಪಯೋಗಿ ಇಲಾಖೆಗೆ ಪಾವತಿಸಿದೆ	6,59,96,578
3	ಉತ್ತಮತೆ ಶುಲ್ಕ	6,10,67,630	3	ಕರ್ನಾಟಕ ನಗರ ಯೋಜನಾ ಮಂಡಳಿಗೆ ಶೇ 5% ಉತ್ತಮತೆ ಶುಲ್ಕ ಪಾವತಿಸಿದೆ.	10,27,456
4	ಅನುಮೋದಿತ ವಿನ್ಯಾಸದಲ್ಲಿನ ಉಳಿಕೆ ನಿವೇಶನ ಗಳ ಬಿಡುಗಡೆ ಸಂಬಂಧ ಸರ್ಕಾರದ ನಿರ್ದೇಶನದಂತೆ ದಂಡ ಶುಲ್ಕ	95,67,675	4	ಪ್ರಾಧಿಕಾರದ ಅಧಿಕಾರಿ ಮತ್ತು ಸಿಬ್ಬಂದಿಗಳ 2016–17 ನೇ ಸಾಲಿನ ವೇತನ ಪಾವತಿಸಿದ ಬಾಬ್ತು.	30,40,200
5	ಎಸ್.ಟಿ.ಪಿ. ಕಾಮಗಾರಿಗಳ ಸಂಬಂಧದ ಭದ್ರತಾ ಠೇವಣಿ ಶುಲ್ಕ	78,59,800	5	ದಿನಪತ್ರಿಕೆಗಳಲ್ಲಿ ಪ್ರಕಟಿಸಿರುವ ಸಂಬಂದ ಪ್ರಕಟಣೆಯ ಬಾಬ್ತು	42,05,552
6	ದಿನಪತ್ರಿಕೆಗಳಲ್ಲಿ ಪ್ರಕಟಿಸುವ ಸಂಬಂಧದ ಬಾಬ್ತು	41,77,317	6	ಹೊರಗುತ್ತಿಗೆ ನೌಕರರ 2016–17 ನೇ ಸಾಲಿನ ವೇತನ ಪಾವತಿಸಿದ ಬಾಬ್ತು	13,21,066
7	ಕಟ್ಟಡ ನಕ್ಷೆ ಅನುಮೋದನೆಯ ಭದ್ರತಾ ಠೇವಣಿ	67,43,000	7	ಹೊರಗುತ್ತಿಗೆ ವಾಹನದ 2016–17 ನೇ ಸಾಲಿನ ಬಾಡಿಗೆ ಪಾವತಿಸಿದ ಬಾಬ್ತು.	4,68,789
8	ಕಟ್ಟಡ ನಕ್ಷೆ ಅನುಮೋದನೆ ಶುಲ್ಕ	9,69,150	8	ಕಛೇರಿ ವಾಹನಗಳ ದುರಸ್ಥಿ ಬಾಬ್ತು ಮತ್ತು	1,74,670
9	ನಗದಾಗಾದ ಚೆಕ್‌ಗಳ ಮೊತ್ತ ನಗದು ಪುಸ್ತಕಕ್ಕೆ ತೆಗೆದುಕೊಂಡಿರುವುದು	----		ಕಛೇರಿ ವಾಹನಗಳ ಇಂಧನ ಬಾಬ್ತು ಪಾವತಿಸಿದೆ.	2,60,393
10	ನಕ್ಷೆ ಮತ್ತು ನಿಯಮಾವಳಿ ಪುಸ್ತಕಗಳ ಮಾರಾಟ ಶುಲ್ಕ	62,350	9	ಕಛೇರಿಯ 2016–17 ನೇ ಸಾಲಿನ ಮಾಹೆಯ ಬಾಡಿಗೆ ಬಾಬ್ತು	4,92,173
11	ದೃಢೀಕೃತ ಪ್ರತಿಗಳಿಗಾಗಿನ ಶುಲ್ಕ/ಪ್ರಮಾಣ ಪತ್ರ ಶುಲ್ಕ	46,688	10	ಟಿ.ಡಿ.ಎಸ್	10,57,134
12	ರಸ್ತೆ ಶುಲ್ಕ	31,70,950	11	ಪ್ರಾಧಿಕಾರಕ್ಕೆ ಲೇಖನ ಸಾಮಾಗ್ರಿ ಖರೀದಿಸಿದ ಬಾಬ್ತು ಮತ್ತು ಇತರೆ ವಸ್ತುಗಳ ಖರೀದಿಸಿದ ಬಾಬ್ತು.	5,27,875
13	ಪರಿಶೀಲನ ಶುಲ್ಕ	7,08,855	12	ಕಛೇರಿಯ ದೂರವಾಣಿ ಬಿಲ್ಲು ಮತ್ತು ಬ್ರಾಡ್‌ಬ್ಯಾಂಡ್ ಬಿಲ್ಲಿನ ಬಾಬ್ತು	72,348
14	ಆರ್.ಟಿ.ಐ	12,909		ಕಛೇರಿಯ ವಿದ್ಯುತ್ ಬಿಲ್ಲಿನ ಬಾಬ್ತು	48,953
15	ಭೂ ಉಪಯೋಗ ಬದಲಾವಣೆ	23,96,000	13	2016–17 ನೇ ಸಾಲಿನ ಪ್ರಾಧಿಕಾರದ	4,12,867

16	ಅರ್ಜಿ ಮಾರಾಟ ಶುಲ್ಕ	64,600		ಮಾನ್ಯ ಅಧ್ಯಕ್ಷರ ಗೌರವ ಸಂಭಾವನೆ ಮತ್ತು ಮನೆ ಬಾಡಿಗೆ ಭತ್ಯೆಯನ್ನು ಪಾವತಿಸಿದ ಬಾಬ್ತು.	
17	ಕಟ್ಟಡ/ ವಿನ್ಯಾಸ ನಕ್ಷೆ ನವೀಕರಣ ಶುಲ್ಕ	21,94,450	14	ಅಂಚೆ ಚೀಟಿಗಳ ಖರೀದಿ ಬಾಬ್ತು	40,000
18	ತಪ್ಪಾಗಿ ಖಾತೆಗೆ ಜಮಾ ಆಗಿರುವುದು	---	15	ಕಛೇರಿ ಕೈಹಣದ ಹಿಂಪಾವತಿ	55,543
19	ವರ್ಗಾವಣೆ ಮೊತ್ತ	----	16	ಕಛೇರಿ ಶೌಚಾಲಯ ಸ್ವಚ್ಚತೆ ಬಾಬ್ತು	12,000
20	ಇತರೆ (ವಿನ್ಯಾಸ ಅನುಮೋದನೆ ಶುಲ್ಕ)	3,52,000	17	ಜೆರಾಕ್ಸ್ ಮತ್ತು ವಿನ್ಯಾಸ ನಕ್ಷೆಯ ಸ್ಕ್ಯಾನಿಂಗ್ ಬಾಬ್ತು.	57,807
			18	ಪ್ರಾಧಿಕಾರಕ್ಕೆ ಪಾವತಿಸಿರುವ ಮೊತ್ತವನ್ನು ವಾಪಸ್ ನೀಡಿರುವ ಬಾಬ್ತು	9,35,510
			19	ಕಛೇರಿ ಉಪಯೋಗಕ್ಕಾಗಿ ಕಂಪ್ಯೂಟರ್, ಪ್ರಿಂಟರ್ ಮತ್ತು ಇತರೇ ವಸ್ತುಗಳ ಖರೀದಿಸಿದ ಬಾಬ್ತು.	89,117
			20	ಅಧಿಕಾರಿ ಮತ್ತು ಸಿಬ್ಬಂದಿಗಳ ಆದಾಯ ತೆರಿಗೆ ಕಟಾಯಿಸಿದ ಬಾಬ್ತು	1,41,630
			21	ಭದ್ರತಾ ಠೇವಣಿ ಮೊತ್ತವನ್ನು ವಾಪಸ್ ನೀಡಿರುವ ಬಾಬ್ತು	60,600
			22	ವೆಬ್ ಸೈಟ್ ನವೀಕರಣ ಮತ್ತು ಅಳವಡಿಸಿದ ಬಾಬ್ತು, ಚಾರ್ಟರ್ಡ್ ಅಕೌಂಟೆಂಟ್ ರವರಿಗೆ ಪಾವತಿಸಿದ ಮೊತ್ತ ಮತ್ತು ಇತರೆ ಬಾಬ್ತು	25,47,937
			23	ಮಹಾಯೋಜನೆ ನಕ್ಷೆ ಮತ್ತು ನಿಯಮಾವಳಿ ಪುಸ್ತಕಗಳನ್ನು ಮುದ್ರಣ ಮಾಡಿ ಸರಬರಾಜು ಮಾಡಿದ ಬಾಬ್ತು	5,81,765
			24	ಇತರೆ (ಸ್ಕಾನಿಂಗ್ ಮತ್ತು ಜೆರಾಕ್ಸ್)	30,812
ಒಟ್ಟು ರೂ		**239,47,18,091**		**ಒಟ್ಟು ರೂ**	**238,89,02,068**

ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ,
ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ